# ಸ್ಕಂದಪುರಾಣದಲ್ಲಿನ 'ಶ್ರೀಗುರುಗೀತಾ' ಬೋಧಿಸುವ ಗುರುತತ್ತ್ವ

ಡಾ. ವಾಗೀಶ್ವರೀ ಶಿವರಾಮ್

ನಮ್ಮ ಸಂಪ್ರದಾಯದಲ್ಲಿ ಅತ್ಯಂತ ಮಹತ್ವದ ಆಧ್ಯಾತ್ಮಿಕ ಆಚರಣೆಯೇ ಗುರುಪೂಜೆ. ಇದಕ್ಕೆ ಶಾಸ್ತ್ರಗಳ, ಪರಂಪರೆಯ ಹಿನ್ನೆಲೆಯೂ ಇದೆ. ಈ ಕುರಿತು ಇಲ್ಲಿ ವಿವರಿಸಿರುವ ಲೇಖಕರು ಹಿರಿಯ ಸಂಸ್ಕೃತ ವಿದ್ವಾಂಸರು; ಮಂಗಳೂರಿನಲ್ಲಿ ಅಧ್ಯಾಪಕರಾಗಿ ಹಲವು ವರ್ಷ ಸೇವೆ ಸಲ್ಲಿಸಿರುವ ಅವರು  ಮೂವತ್ತಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದಾರೆ. ಅವರು ಉತ್ತಮ ವಾಗ್ಮಿಗಳೂ ಹೌದು.



''ಒಂದು ಗರ್ಭಿಣಿ ಸಿಂಹ, ಕುರಿಗಳ ಮಂದೆಯ ಮಧ್ಯದಲ್ಲಿ, ಮರಿಯನ್ನು ಹೆತ್ತು ಸತ್ತುಹೋಯಿತು. ಸಿಂಹದ ಮರಿ, ಕುರಿಮರಿಗಳೊಡನೆ ಬ್ಯಾ ... ಬ್ಯಾ ... ಬ್ಯಾ .. ಎನ್ನುತ್ತಾ, ಹುಲ್ಲು ತಿನ್ನುತ್ತಾ ಬೆಳೆಯುತ್ತಿತ್ತು. ಒಂದು ದಿನ ದೊಡ್ಡ ಸಿಂಹವೊಂದು, ಕುರಿಗಳ ಗುಂಪಿನ ಮೇಲೆ ಆಕ್ರಮಣ ಮಾಡಿತು. ಎಲ್ಲಾ ಕುರಿಗಳೂ, ಕುರಿಮರಿಗಳೂ ಹೆದರಿ ಓಡಿಹೋದುವು. ಕುರಿಮರಿ ಆಗಿದ್ದ ಸಿಂಹದ ಮರಿ ಬ್ಯಾ.. ಬ್ಯಾ .. ಎನ್ನುತ್ತಾ ಹೆದರಿ ನಿಂತಿತ್ತು. ದೊಡ್ಡ ಸಿಂಹ, ತನ್ನದೇ ಜಾತಿಯ ಸಿಂಹದ ಮರಿಯನ್ನು ನೋಡಿತು. ಅದನ್ನು ಎಳೆದುಕೊಂಡು, ತನ್ನ ಗುಹೆಯ ಬಳಿ ತಂದಿತು.ಅದರ ಸ್ವರೂಪವನ್ನು ಪರಿಚಯಿಸಿ, ಗರ್ಜಿಸಲು ಕಲಿಸಿತು. ಕುರಿಮರಿ ಆಗಿದ್ದ ಸಿಂಹದ ಮರಿ, ತನ್ನ ಸ್ವರೂಪವನ್ನು ಅರಿತು ಗರ್ಜಿಸಲು ಆರಂಭಿಸಿತು.''

ವೇದಾಂತಿಗಳು ತಿಳಿಸುವ ಈ ದೃಷ್ಟಾಂತ ಕಥೆಯಲ್ಲಿ , ಕುರಿಮರಿ ಆಗಿದ್ದ ಸಿಂಹದ ಮರಿ, ಪ್ರತಿಯೊಬ್ಬ ಜೀವಾತ್ಮನನ್ನು (ವ್ಯಕ್ತಿಯನ್ನು) ಪ್ರತಿನಿಧಿಸುತ್ತದೆ. ತನ್ನಲ್ಲೇ ಇರುವ ಆತ್ಮಚೈತನ್ಯವನ್ನು, ತನ್ನ ಸ್ವರೂಪವನ್ನು ತಿಳಿಯಲು ಆತನಿಗೆ, (ದೊಡ್ಡಸಿಂಹದಂತೆ ಗರ್ಜಿಸುವ) ಸ್ವರೂಪಜ್ಞಾನವಿರುವ ಗುರು ಬೇಕು. ಗುರುವಿನ ಬೋಧನೆಯಂತೆ ಸಾಧನೆ ಮಾಡಿದಾಗ, ತಾನೂ ಗುರುವಾಗುತ್ತಾನೆ. ಗುರುವು ಸ್ಪರ್ಶಮಣಿಯಂತೆ. ಮುಟ್ಟಿದ್ದನ್ನೆಲ್ಲಾ ಚಿನ್ಮಯ (ಜ್ಞಾನಮಯ) ಆಗಿಸುತ್ತಾನೆ.

ವಿನಾಶವಾಗುವ ಈ ಪಾಂಚಭೌತಿಕ ಶರೀರದಲ್ಲಿ , ಅವಿನಾಶಿಯಾದ ತತ್ತ್ವ ಇದೆ. ಅದೇ ಪರಮಾತ್ಮ, ಗುರುತತ್ತ್ವ. ಆ ತತ್ತ್ವದ ಹಿರಿಮೆಯನ್ನು ಭಗವದ್ಗೀತೆ ಬಣ್ಣಿಸುವ ಬಗೆ ಹೀಗಿದೆ: *(೨.೨೩)*

**ನೈನಂ ಛಿಂದಂತಿ ಶಸ್ತ್ರಾಣಿ, ನೈನಂ ದಹತಿ ಪಾವಕಃ ।**
**ನ ಚೈನಂ ಕ್ಲೇದಯಂತ್ಯಾಪಃ, ನ ಶೋಷಯತಿ ಮಾರುತಃ ॥**

'ಈ ಆತ್ಮನನ್ನು ಶಸ್ತ್ರಗಳು ಕತ್ತರಿಸಲಾರವು. ಬೆಂಕಿಯು ಸುಡಲಾರದು. ನೀರು ತೋಯಿಸದು. ಗಾಳಿಯು ಒಣಗಿಸಲಾರದು.' ಲೋಕಗುರುವಾದ ಶ್ರೀಕೃಷ್ಣನು, ಆತ್ಮನ ಗತಿಯನ್ನು ಹೀಗೆ ತಿಳಿಸುತ್ತಾನೆ:

**ವಾಸಾಂಸಿ ಜೀರ್ಣಾನಿ ಯಥಾ ವಿಹಾಯ**
**ನವಾನಿ ಗೃಹ್ಣಾತಿ ನರೋಽಪರಾಣಿ ।**
**ತಥಾ ಶರೀರಾಣಿ ವಿಹಾಯ ಜೀರ್ಣಾನ್ಯನ್ಯಾನಿ**
**ಸಂಯಾತಿ ನವಾನಿ ದೇಹೀ ॥''** *(ಗೀತೆ, ೨-೨೨)*

''ಮನುಷ್ಯನು ಹಳೆಯ ಬಟ್ಟೆಗಳನ್ನು ಬಿಟ್ಟು, ಹೊಸ ಬಟ್ಟೆ - ಧರಿಸುವಂತೆ; ಆತ್ಮನು, ಮುದಿಯಾದ ಶರೀರವನ್ನು ಬಿಟ್ಟು, ಹೊಸ ಶರೀರವನ್ನು ಹೊಂದುತ್ತಾನೆ.''

ಅದ್ವೈತ ತತ್ತ್ವವು ತಿಳಿಸುವಂತೆ, ಪ್ರತಿಯೊಬ್ಬ ಜೀವಾತ್ಮನೂ ಪರಮಾತ್ಮನ ಸ್ವರೂಪವೇ! (ಜೀವೋ ಬ್ರಹ್ಮೈವ ನಾಪರಃ) ಮಾಯೆಯ ಮುಸುಕಿನಿಂದ ಜೀವಿಯು ಸ್ವಸ್ವರೂಪದ ಅರಿವಾಗದೇ ಕಷ್ಟಕೋಟಲೆಗಳ ಸಮುದ್ರದಲ್ಲಿ ಮುಳುಗಿದ್ದಾನೆ. ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು, ಪಂಚಕೋಶಗಳು, ಮನಸ್ಸು, ಬುದ್ಧಿ, ಚಿತ್ತ, ಅಹಂಕಾರಗಳು... ಇತ್ಯಾದಿಗಳನ್ನೇ ತಾನೆಂದು ಭಾವಿಸಿದ್ದಾನೆ. ಈ ಎಲ್ಲಾ ಉಪಾಧಿಗಳನ್ನು ಮೀರಿದ ತತ್ತ್ವವೇ ಗುರುತತ್ತ್ವ, ಪರಂಜ್ಯೋತಿ ಸ್ವರೂಪ, ಶುದ್ಧ ಚೈತನ್ಯ, ಆತ್ಮತತ್ತ್ವ. ಈ ಆತ್ಮಜ್ಞಾನವನ್ನು ತಿಳಿಸಿಕೊಡುವ ವಿದ್ಯೆಯೇ ಅಧ್ಯಾತ್ಮವಿದ್ಯೆ, ಬ್ರಹ್ಮವಿದ್ಯೆ. ಅಧ್ಯಾತ್ಮವು ಹಿಂದೂ ಧರ್ಮದ ತಾಯಿ ಬೇರು. ಜ್ಞಾನದ ಪರಮ, ಚರಮಗುರಿಯೇ ''ಆತ್ಮಜ್ಞಾನ.'' ಇದನ್ನೇ ನಾಲ್ಕು ವೇದಗಳು, ದಶ-ಉಪನಿಷತ್ತುಗಳು, ಹದಿನೆಂಟು ಪುರಾಣಗಳು, ರಾಮಾಯಣ, ಮಹಾಭಾರತಗಳೂ, ಎಲ್ಲಾ ಶಾಸ್ತ್ರಗಳೂ ಸಾರಿ ಹೇಳುತ್ತಿವೆ. ಗುಹ್ಯ, ದರ್ಶನ, ಸಮಾಧಿ ಭಾಷೆಗಳಲ್ಲಿರುವ ಈ ಗುರುತತ್ತ್ವವನ್ನು ತಿಳಿಯಲೂ ಗುರುಕೃಪೆ, ಶಾಸ್ತ್ರಕೃಪೆ, ದೈವಕೃಪೆಗಳು ಬೇಕು. ಇದನ್ನೇ ದಾಸರು - ''ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ'' ಎಂದು ತಿಳಿಸಿದ್ದಾರೆ. ಗುರುವಿಗೇ ಸಂಪೂರ್ಣ ಶರಣಾಗತನಾದಾಗ, ಆತ್ಮದ ಅರಿವು ಸಾಧ್ಯ. ಗುರು-ಶಿಷ್ಯ ಪರಂಪರೆ ನಮ್ಮ ದೇಶದ ವೈಶಿಷ್ಟ್ಯ. ಗುರುಕುಲಗಳ ಮೂಲಕ, ಈ ಅಧ್ಯಾತ್ಮವಿದ್ಯೆಯ ಶಿಕ್ಷಣ ಇಲ್ಲಿ ನಡೆಯುತ್ತಿತ್ತು. ಅಂತೆಯೇ ಅಂದು ಭಾರತ ಗುರುಸ್ಥಾನದಲ್ಲಿ ಇತ್ತು.

''ಗುರು ಹಾಗೂ ಭಗವಂತ ಇಬ್ಬರೂ ಒಟ್ಟಿಗೇ ಕಾಣಿಸಿಕೊಂಡರೆ, ಯಾರ ಪಾದಗಳಿಗೆ ಮೊದಲು ನಮಸ್ಕರಿಸಬೇಕು?'' ಎಂದು ಒಬ್ಬ ಶಿಷ್ಯ ಸಂತ ಕಬೀರನನ್ನು ಕೇಳಿದನಂತೆ. ಆಗ ಕಬೀರರು, ''ಗುರುವಿಗೇ ಮೊದಲ ವಂದನೆ ಸಲ್ಲಬೇಕು. ಏಕೆಂದರೆ ಭಗವಂತನೆಂಬ ಜ್ಯೋತಿಯ ಸ್ವರೂಪವನ್ನು ತಿಳಿಸಿಕೊಡುವವನು ಗುರುವೇ ಆಗಿದ್ದಾನೆ'' ಎಂದು ತಿಳಿಸಿದರಂತೆ. ಆದ್ದರಿಂದಲೇ ''ಏಕಾಕ್ಷರಂ ಕಲಿಸಿದಾತಂ ಗುರು'' — ಒಂದೇ ಒಂದು ಅಕ್ಷರವನ್ನು ಕಲಿಸಿದಾತನೂ ಗುರು, ಎಂಬ ಕೃತಜ್ಞತೆಯ ಭಾವ ಬೆಳೆದು ಬಂದಿದೆ.

**ನಾನು ಬ್ರಹ್ಮನು ಹೌದಂತೆ, ನಾನು ನರನು ಅಲ್ಲಂತೆ ।**
**ಏನೋ ಏನೋ ಬೋಧಿಸಿ ಸದ್ಗುರು, ತಾನೇ ತಾನಾದನಂತೆ ॥**

ಎನ್ನುವ ಭಜನೆಯ ಸಾಲುಗಳಲ್ಲಿರುವ, ಸಾರಸ್ವರೂಪವಾದ ''ಸ್ವರೂಪಜ್ಞಾನ''(ಬ್ರಹ್ಮಜ್ಞಾನ) ಅತ್ಯಂತ ನಿಗೂಢವಾದುದು. ಅಡುಗೆಮನೆಯಲ್ಲಿ ಕಳೆದುಕೊಂಡ ಸೂಜಿಯನ್ನು, ಅಜ್ಜಿ ಬೇರೆ ಕಡೆ ಹುಡುಕಿದಂತೆ, ಪ್ರತಿಯೊಬ್ಬ ಜೀವಾತ್ಮನೂ ಪರಮಾತ್ಮನಿಗಾಗಿ ಎಲ್ಲಾ ಕಡೆ ಹುಡುಕಾಡುತ್ತಾನೆ. ಸದ್ಗುರು ಮಾತ್ರ ಆ ಪರಮ ಗುರುವಿನ ದರ್ಶನ ಮಾಡಿಸಲು ಸಮರ್ಥನಾಗಿರುತ್ತಾನೆ.

ಈ ಗುರುತತ್ತ್ವದ ಜಿಜ್ಞಾಸೆ ಕೇವಲ ಮನುಷ್ಯಲೋಕಕ್ಕೇ ಸೀಮಿತವಾಗಿಲ್ಲ. ದೇವಲೋಕದಲ್ಲೂ ನಡೆಯುತ್ತಿರುತ್ತದೆ. ಸಾಕ್ಷಾತ್ ನಾರಾಯಣನೇ, ತನ್ನ ಪುತ್ರ ಬ್ರಹ್ಮದೇವನಿಗೆ ಐದು ಶ್ಲೋಕಗಳಲ್ಲಿ ಆ ಪರಮತತ್ತ್ವವನ್ನು ಉಪದೇಶಿಸಿದನೆಂದು ಭಾಗವತ ಪುರಾಣದಲ್ಲಿ ('ಪಂಚಶ್ಲೋಕೀ ಭಾಗವತ') ತಿಳಿಸಿದೆ. ಹಾಗೆಯೇ ಸ್ಕಂದ ಪುರಾಣದಲ್ಲಿ, ಶಿವನು ಪಾರ್ವತಿಗೆ ಆ ಪರತತ್ತ್ವವನ್ನು ಉಪದೇಶಿಸಿದ ಭಾಗವು **'ಶ್ರೀಗುರುಗೀತಾ'** ಎಂದೇ ಪ್ರಸಿದ್ಧವಾಗಿದೆ. ಈ ವಿಸ್ತೃತವಾದ ಚಿಂತನೆಯ ಹಿನ್ನೆಲೆಯಲ್ಲಿ , ಗುರುಗೀತೆಯ ಸಾರವನ್ನು, ಸಂಗ್ರಹರೂಪದಲ್ಲಿ ತಿಳಿದುಕೊಳ್ಳೋಣ.

### ಸ್ಕಂದಪುರಾಣದಲ್ಲಿನ 'ಶ್ರೀಗುರುಗೀತೆಯ' ಸಾರಸರ್ವಸ್ವ

ಕೈಲಾಸದಲ್ಲಿ ಪಾರ್ವತಿಯು, ಪತಿಯಾದ ಶಂಕರನೊಡನೆ ಏಕಾಂತದಲ್ಲಿ ಇದ್ದಾಗ, ''ಸ್ವಾಮಿ! ಈ ಜೀವಾತ್ಮನು ತನ್ನ ಸ್ವರೂಪವನ್ನು ಮರೆತು, ದುಃಖ-ದುಮ್ಮಾನಗಳಲ್ಲೇ ಇದ್ದಾನೆ. ಆತನು ತನ್ನ ನಿಜಸ್ವರೂಪವನ್ನು ಹೊಂದುವುದು ಹೇಗೆ?'' ಎಂಬ ಗಹನವಾದ ಪ್ರಶ್ನೆಯನ್ನು ಕೇಳುತ್ತಾಳೆ. ಶಿವನು, ಉತ್ತರ ರೂಪದಲ್ಲಿ ಗುರುವಿನ ಮಹತ್ವವನ್ನು ಎಳೆಎಳೆಯಾಗಿ ತಿಳಿಸುತ್ತಾನೆ. 'ಗುರು' ಶಬ್ದಕ್ಕೆ ಬೃಹತ್ತಾದದ್ದು, ಅತ್ಯಂತ ದೊಡ್ಡದು ಎಂದು ಅರ್ಥವಿದೆ. ವೇದಾಂತಿಗಳ 'ಬ್ರಹ್ಮ' ಶಬ್ದಕ್ಕೂ ಅದೇ ಅರ್ಥ. ನಾಮ, ರೂಪಗಳನ್ನು ಮೀರಿದ ತತ್ತ್ವವೇ ಗುರುತತ್ತ್ವ. ಅದನ್ನೇ ಪರಬ್ರಹ್ಮ, ಪರಮಾತ್ಮ, ದೇವರು, ಭಗವಂತ ಇತ್ಯಾದಿ ಶಬ್ದಗಳಿಂದ ಕರೆಯುತ್ತೇವೆ.

ಶಿವನು, ಗುರುವಿನ (ಪರಮಾತ್ಮನ) ಹಿರಿಮೆ-ಗರಿಮೆಗಳನ್ನು ಪಾರ್ವತಿಗೆ ತಿಳಿಸಿದ ಬಗೆ ಹೀಗಿದೆ: *(ಶ್ಲೋಕ-೩೨)*

**ಗುರುರ್ಬ್ರಹ್ಮಾ ಗುರುರ್ವಿಷ್ಣುಃ, ಗುರುರ್ದೇವೋ ಮಹೇಶ್ವರಃ ।**
**ಗುರುಃ ಸಾಕ್ಷಾತ್ ಪರಬ್ರಹ್ಮ, ತಸ್ಮೈ ಶ್ರೀಗುರವೇ ನಮಃ ॥**

‘‘ಗುರುವೇ ಸೃಷ್ಟಿಕರ್ತನಾದ ಬ್ರಹ್ಮ. ಸ್ಥಿತಿಕರ್ತನಾದ ವಿಷ್ಣು. ಲಯಕರ್ತನಾದ ಶಿವ. ಆತನೇ ಪರಬ್ರಹ್ಮ ಚೈತನ್ಯವು. ಅಂತಹ ಆದಿಶಕ್ತಿಗೆ ನಮಸ್ಕಾರ.’’

‘GOD’(ದೇವರು) ಈ ಆಂಗ್ಲ ಪದದಲ್ಲಿರುವ ಅಕ್ಷರಗಳಾದ G-Generator (ಸೃಷ್ಟಿಕರ್ತ), O-Organiser (ಸ್ಥಿತಿಕರ್ತ), D-Destroyer (ಲಯಕರ್ತ) ಎಂಬುದನ್ನು ಸೂಚಿಸುತ್ತವೆ. ಹಾಗೆಯೇ ದೇ-ದೇಹ ಇಲ್ಲದವನು. ವ-ವರ್ಣಾತೀತನೂ, ರು-ರೂಪ ಇಲ್ಲದವನು - ‘ದೇವ’ ಎಂದು ಬಣ್ಣಿಸುವವರೂ ಇದ್ದಾರೆ. ಇದನ್ನೇ ಗುರುಗೀತೆಯ ಶ್ಲೋಕ ಹೀಗೆ ತಿಳಿಸುತ್ತದೆ:

**ಗುಕಾರಂ ಚ ಗುಣಾತೀತಂ, ರುಕಾರಂ ರೂಪವರ್ಜಿತಮ್ ।**
**ಗುಣಾತೀತಸ್ವರೂಪಂ ಚ, ಯೋ ದದ್ಯಾತ್ಸ ಗುರುಃ ಸ್ಮೃತಃ ॥**

*( ಸ್ಕಂದ ಪುರಾಣ, ಶ್ಲೋಕ ೪೬ )*

‘ಗು’ ಎಂದರೆ ಎಲ್ಲಾ ಗುಣಗಳನ್ನು ಮೀರಿದವನು.‘ರು’ ಎಂದರೆ ರೂಪ ಇಲ್ಲದವನು. ನಿರ್ಗುಣನಾದ, ನಿರಾಕಾರನಾದ ಪರಮಾತ್ಮನ ದರ್ಶನ ಮಾಡಿಸುವವನೇ ‘ಗುರು’.

**ಯೇನ ಚೇತಯತೇ ಹೀದಂ, ಚಿತ್ತಂ ಚೇತಯತೇ ಸ್ವಯಮ್ ॥**
**ಜಾಗ್ರತ್ ಸ್ವಪ್ನ ಸುಷುಪ್ತ್ಯಾದಿ, ತಸ್ಮೈ ಶ್ರೀ ಗುರವೇ ನಮಃ ॥**

*(ಶ್ಲೋಕ ೩೮)*

‘‘ಈ ಜಗತ್ತಿನ ಕಣಕಣವೂ ಆ ಅತ್ಮತತ್ತ್ವದಿಂದಲೇ (ಗುರುತತ್ತ್ವದಿಂದಲೇ) ಚೈತನ್ಯದಿಂದ ತುಂಬಿದೆ. ಈ ಆತ್ಮತತ್ತ್ವವು ಜಾಗ್ರತ್-ಸ್ವಪ್ನ-ಸುಷುಪ್ತಿಗಳಲ್ಲೂ (ಗಾಢನಿದ್ರೆಯಲ್ಲೂ) ಬದಲಾಗದೆ ಒಂದೇ ರೀತಿಯಲ್ಲಿ ಇರುತ್ತದೆ. ಮನಸ್ಸು (ಬುದ್ಧಿ, ಚಿತ್ತ, ಅಹಂಕಾರಗಳೂ) - ಈ ಆತ್ಮದಿಂದಲೇ ಚೈತನ್ಯವನ್ನು ಪಡೆದುಕೊಳ್ಳುತ್ತದೆ.’’

**ಅಜೋಽಹಮ್ ಅಜರೋಽಹಂ ಚ, ಅನಾದಿನಿಧನಂ ಸ್ವಯಮ್ ।**
**ಅವಿಕಾರಃ ಚಿದಾನಂದಃ ಅಣೀಯಾನ್ ಮಹತೋ ಮಹಾನ್ ॥**

*(ಶ್ಲೋಕ ೬೩)*

‘‘ಈ ಆತ್ಮನು ಹುಟ್ಟು, ಮುಪ್ಪು, ಸಾವುಗಳು ಇಲ್ಲದವನು. ಆದಿ, ಅಂತ್ಯಗಳಿಲ್ಲದವನು. ವಿಕಾರಗಳಿಲ್ಲದವನು. ಜ್ಞಾನ ಹಾಗೂ ಆನಂದಗಳ ಸ್ವರೂಪನು. ಅಣುವಿಗಿಂತಲೂ ಅಣುವಾದವನು. ಮಹತ್ತಿಗಿಂತಲೂ ಹಿರಿದಾದವನು.’’

ಗುರುಕೃಪೆಗಾಗಿ (ಆತ್ಮದ ಅನುಭಾವಕ್ಕಾಗಿ) ಗುರುವಿನ ಪಾದಕಮಲಗಳಿಗೇ ಶರಣು ಹೋಗಬೇಕು:

**ಧ್ಯಾನಮೂಲಂ ಗುರೋಃ ಮೂರ್ತಿಃ,**
**ಪೂಜಾಮೂಲಂ ಗುರೋಃ ಪದಮ್ ।**
**ಮಂತ್ರಮೂಲಂ ಗುರೋಃ ವಾಕ್ಯಂ,**
**ಮೋಕ್ಷಮೂಲಂ ಗುರೋಃ ಕೃಪಾ ॥** *(ಶ್ಲೋಕ ೬೬)*

‘ಆತ್ಮದ ಸ್ವರೂಪವೇ ಧ್ಯಾನದ ಮೂಲವಾಗಿದೆ. ಗುರುಪಾದಗಳೇ ಪೂಜೆಗೆ ಮೂಲವಾಗಿವೆ. ಗುರುವಾಕ್ಯವೇ ಮಂತ್ರಕ್ಕೆ ಮೂಲವಾಗಿದೆ. ಆತ್ಮದ ಕೃಪೆಯಿಂದಲೇ ಆತ್ಮದ ಅರಿವು.’ (ಇದೇ ದೇಹಾತ್ಮ ಭಾವದ ಬಿಡುಗಡೆಯ ಅನುಭಾವ)

ಆಚಾರ್ಯ ಶಂಕರರೂ, ಗುರುಪಾದುಕಾ ಸ್ತೋತ್ರದಲ್ಲಿ, ಆತ್ಮಜ್ಞಾನಿಗಳಾದ (ಆತ್ಮಸ್ವರೂಪರೇ ಆಗಿರುವ) ಗುರುಗಳ ಪಾದುಕೆಗಳ ಮಹಿಮೆಯನ್ನು ವರ್ಣಿಸಿರುವ ರೀತಿ, ಶಿವನ ಉಪದೇಶಕ್ಕೆ ಸಂವಾದಿಯಾಗಿರುವುದನ್ನು ಮನಗಾಣಬಹುದು:

**ಅನಂತ ಸಂಸಾರ ಸಮುದ್ರತಾರಾ**
**ನೌಕಾಯಿತಾಭ್ಯಾಂ ಗುರುಭಕ್ತಿದಾಭ್ಯಾಮ್ ।**
**ವೈರಾಗ್ಯ ಸಾಮ್ರಾಜ್ಯದ ಪೂಜನಾಭ್ಯಾಂ**
**ನಮೋ ನಮಃ ಶ್ರೀಗುರುಪಾದುಕಾಭ್ಯಾಮ್ ॥**

‘ಅಂತ್ಯವಿಲ್ಲದ ಸಂಸಾರವೆಂಬ ಸಮುದ್ರವನ್ನು ದಾಟಿಸುವುದರಲ್ಲಿ ನೌಕೆಯಾಗಿರುವ, ಗುರುಭಕ್ತಿಯನ್ನು ಉಂಟುಮಾಡುವ, ವೈರಾಗ್ಯ ಸಾಮ್ರಾಜ್ಯವನ್ನು ಪಡೆಯುವುದಕ್ಕಾಗಿ ಪೂಜಿಸಲ್ಪಡುವ ‘ಗುರು ಪಾದುಕೆಗಳಿಗೆ’ ನಮಸ್ಕಾರ.

ಗುರುದರ್ಶನವನ್ನು (ಆತ್ಮದರ್ಶನ) ಪಡೆಯಲು ಬಯಸುವ ಸಾಧಕನು ನಿರಂತರವಾಗಿ ಗುರುವಿನ ಸ್ಮರಣೆ, ಧ್ಯಾನ, ಮಂತ್ರ ಜಪ, ಭಜನೆ, ನಮನ, ಶರಣಾಗತಿಗಳ ಮೂಲಕ ಭಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು ಎಂದು ಶಿವನು ಪಾರ್ವತಿಗೆ ತಿಳಿಸುತ್ತಾನೆ.

**ಶ್ರೀಮತ್ಪರಬ್ರಹ್ಮ ಗುರುಂ ಸ್ಮರಾಮಿ**
**ಶ್ರೀಮತ್ಪರಬ್ರಹ್ಮ ಗುರುಂ ವದಾಮಿ ।**
**ಶ್ರೀಮತ್ಪರಬ್ರಹ್ಮ ಗುರುಂ ನಮಾಮಿ**
**ಶ್ರೀಮತ್ಪರಬ್ರಹ್ಮ ಗುರುಂ ಭಜಾಮಿ ॥** *(ಶ್ಲೋಕ: ೮೭)*

‘‘ಪರಬ್ರಹ್ಮ ಸ್ವರೂಪನಾದ ಗುರುವನ್ನು ಸ್ಮರಿಸುವೆನು. ಪರಬ್ರಹ್ಮನಾದ ಗುರುವನ್ನು ನಮಿಸುವೆನು. ಪರಬ್ರಹ್ಮನಾದ ಗುರುವನ್ನೇ ಭಜಿಸುವೆನು, ಸದಾ ಗುರುಧ್ಯಾನ ನಿರತನಾಗುವೆನು.’’

‘‘ಲೌಕಿಕ ವ್ಯವಹಾರಗಳಲ್ಲೇ ಮುಳುಗಿರುವ ಸಾಧಕನಿಗೆ, ಸದಾ ಗುರುಧ್ಯಾನ ಹೇಗೆ ಸಾಧ್ಯವಾದೀತು?’’ ಎಂಬ ಪ್ರಶ್ನೆಗೆ, ಭಾಗವತದಲ್ಲಿನ ಈ ದೃಷ್ಟಾಂತ ಮಾರ್ಗದರ್ಶನವಾದೀತು;

**ಪುಂಖಾನುಪುಂಖವಿಷಯಾನ್ ಉಪಸೇವ್ಯಮಾನೋ**
**ಧೀರೋ ನ ಮುಂಚತಿ ಮುಕುಂದಪದಾರವಿಂದಂ ।**
**ಸಂಗೀತತಾಲ-ಲಯ-ವಾದ್ಯವಶಂ ಗತಾಪಿ**
**ಮೌಲಿಸ್ಥಸ್ಥಾಲೀ ಪರಿರಕ್ಷಣಧೀರ್ನಟೀವ ॥**

‘‘ಒಬ್ಬಳು ನರ್ತಕಿಯು ಸಂಗೀತದ ತಾಲ, ಲಯಗಳಿಗೆ ತಕ್ಕಂತೆ ನರ್ತನ ಮಾಡುತ್ತಿದ್ದರೂ, ತನ್ನ ತಲೆಯ ಮೇಲಿರುವ ಕಲಶವು ಕೆಳಗೆ ಬೀಳದಂತೆ, ಎಚ್ಚರವಹಿಸುತ್ತಾಳೆ. ಹಾಗೆಯೇ, ಧೀರನಾದ ಸಾಧಕನು ವಿಷಯಸುಖಗಳನ್ನು ಅನುಭವಿಸು

ತ್ತಿದ್ದರೂ, ತನ್ನ ಹೃತ್ಕಮಲದಲ್ಲಿ ಭಗವಂತನ ಪಾದಕಮಲಗಳ ಧ್ಯಾನವನ್ನು ಬಿಡುವುದಿಲ್ಲ.''

ಗುರುಧ್ಯಾನ ನಿರತನಾದ ಸಾಧಕನು, ಕೀಟ-ಭ್ರಮರ ನ್ಯಾಯದಂತೆ (ಭ್ರಮರದ ಚಿಂತೆಯಲ್ಲೇ ಇರುವ ಕೀಟ, ತಾನೇ ಭ್ರಮರವಾಗಿ ಪರಿವರ್ತನೆಗೊಳ್ಳುತ್ತದೆ) ತಾನೇ ಬ್ರಹ್ಮಸ್ವರೂಪವನ್ನು ಹೊಂದುತ್ತಾನೆ: *( ಶ್ಲೋಕ ೧೧೮)*

**ಗುರುಧ್ಯಾನಂ ತಥಾ ಕೃತ್ವಾ, ಸ್ವಯಂ ಬ್ರಹ್ಮಮಯೋ ಭವೇತ್ ।**
**ಪಿಂಡೇ ಪದೇ ತಥಾ ರೂಪೇ, ಮುಕ್ತೋಽಸೌ ನಾತ್ರ ಸಂಶಯಃ ॥**

''ಗುರುವನ್ನೇ ಧ್ಯಾನಿಸುತ್ತಾ, ತಾನೇ ಪರಬ್ರಹ್ಮನಾಗುತ್ತಾನೆ. ಈ ಗುರುಧ್ಯಾನವನ್ನು ಶಬ್ದ, ರೂಪ ಅಥವಾ ಯಾವುದೇ ರೀತಿಯಲ್ಲಿ ಮಾಡಿದರೂ, ಸಾಧಕನು ಆತ್ಮಸಾಕ್ಷಾತ್ಕಾರ ಹೊಂದುತ್ತಾನೆ.''

ಶ್ರೀಗುರುಗೀತೆಯ ಪಾರಾಯಣದ ಫಲವನ್ನೂ ಶಿವನು ಪಾರ್ವತಿಗೆ ಹೀಗೆ ತಿಳಿಸುತ್ತಾನೆ: *(ಶ್ಲೋಕ ೧೨೮)*

**ಗುರುಗೀತಾತ್ಮಕಂ ದೇವಿ! ಶುದ್ಧತತ್ತ್ವಂ ಮಯೋದಿತಮ್ ।**
**ಭವವ್ಯಾಧಿವಿನಾಶಾರ್ಥಂ, ಸ್ವಯಮೇವ ಜಪೇತ್ಸದಾ ॥**

''ದೇವೀ! ಈ ಗುರುಗೀತಾರೂಪದ ತತ್ತ್ವವನ್ನು, ಈ ಹುಟ್ಟು-ಸಾವುಗಳೆಂಬ ರೋಗದಿಂದ ಬಿಡುಗಡೆ ಹೊಂದಲು ಇಚ್ಛಿಸುವವನು ಯಾವಾಗಲೂ, ಜಪಿಸಬೇಕು.''

ಅಲ್ಲದೇ ಪಾಪ, ದಾರಿದ್ರ್ಯ, ಮೃತ್ಯುಭಯ, ವ್ಯಾಧಿಯಿಂದ ಬಿಡುಗಡೆ, ಅಷ್ಟ ಸಿದ್ಧಿಗಳ ಪ್ರಾಪ್ತಿ, ಐಶ್ವರ್ಯ ಪ್ರಾಪ್ತಿ, ಜಯ, ಮೋಕ್ಷ ಇತ್ಯಾದಿಗಳೆಲ್ಲವನ್ನೂ ಕರುಣಿಸುವ 'ಕಾಮಧೇನು', ಈ 'ಗುರುಗೀತೆ' ಆಗಿದೆ ಎಂದೂ ತಿಳಿಸಿದ್ದಾನೆ.

ಸುಮಾರು ೧೭೫ ಶ್ಲೋಕಗಳಲ್ಲಿ ತಿಳಿಸಿರುವ ಪರತತ್ತ್ವದ ಸಾರದ ಸಿಂಹಾವಲೋಕನ ಇಲ್ಲಿದೆ. ಈ ಜ್ಞಾನದ ಬಿಂದುಗಳು, ಜ್ಞಾನದ ಸಿಂಧುವನ್ನು ಪ್ರವೇಶಿಸಲು ಪೂರಕವಾಗಬೇಕು. ಹಿಂದೆಂದಿಗಿಂತಲೂ, ಇಂದು ಆಧ್ಯಾತ್ಮಿಕತೆಯ ಆವಶ್ಯಕತೆ ಹೆಚ್ಚಿದೆ. ನಮ್ಮೆಲ್ಲರ ಭಾವಗಳೂ ಪರಿಶುದ್ಧವಾದಾಗ, ಶಾರೀರಿಕ, ಮಾನಸಿಕ, ಬೌದ್ಧಿಕ ಸುಖ ಶಾಂತಿಯ ಸಂಪತ್ತುಗಳು ಸುಲಭ ಸಾಧ್ಯವಾಗುತ್ತವೆ. ಈ ನಿಟ್ಟಿನಲ್ಲಿ, ವಿದೇಶೀಯ ಚಿಂತಕಿಯೊಬ್ಬಳ ಮಾತುಗಳು ಚಿಂತನಾಯೋಗ್ಯವಾಗಿದೆ.

''ಒಬ್ಬನು ತನ್ನ ಆಹಾರದ ಸುಧಾರಣೆಯಲ್ಲಿ ವ್ಯಯಿಸುವ ಸಮಯವನ್ನೂ, ಹಣವನ್ನೂ ತನ್ನ ಆಲೋಚನೆಯ ನಿಯಂತ್ರಣಕ್ಕಾಗಿ ಮತ್ತು ಭಾವಶುದ್ಧಿಗಾಗಿ ವಿನಿಯೋಗಿಸಿದ್ದರೆ, ಹೊಟ್ಟೆಗೆ-ಮನಸ್ಸಿಗೆ ಸಂಬಂಧಿಸಿದ ಕಾಯಿಲೆಗಳು ಸಂಪೂರ್ಣ ಮಾಯವಾಗುತ್ತದೆ.''(-ಕ್ಯಾಥರೀನ್ ಪಾಂಡರ್). ಉತ್ತಮ ವಿಚಾರಗಳು ಎಲ್ಲಾ ಕಡೆಯಿಂದಲೂ ಬಂದು ನಮ್ಮೆಲ್ಲರ ಭಾವನೆಗಳು ಪರಿಶುದ್ಧವಾಗಲಿ. ಅದಕ್ಕಾಗಿ ಶ್ರೀಗುರುವಿಗೇ ಶರಣು ಹೋಗೋಣ.

## ಶ್ರೀಮಾತೆಯವರ ಉಪದೇಶಗಳು



❋ ಮಂತ್ರಜಪ ಮಾಡುತ್ತಾ ಮನಸ್ಸಿನ ದೋಷಗಳು ನಾಶವಾಗುತ್ತವೆ. ಅದನ್ನು ಮಾಡದಿದ್ದರೆ ಹೇಗಾದೀತು? ಹುಚ್ಚುತನ ಬೇಡ. ಸಮಯ ಸಿಕ್ಕಿದಾಗಲೆಲ್ಲ ಮಂತ್ರಜಪ ಮಾಡು. ಶ್ರೀರಾಮಕೃಷ್ಣರನ್ನು ಕರೆ.

❋ ನೋಡು, ಎಲ್ಲದಕ್ಕೂ ಹೊಂದಿಕೊಂಡು ಹೋಗಬೇಕು. ಶ್ರೀರಾಮಕೃಷ್ಣರು ಶ, ಷ, ಸ ಎನ್ನುತ್ತಿದ್ದರು. ಅಂದರೆ, ಎಲ್ಲವನ್ನೂ ಸಹಿಸಿಕೊಳ್ಳಬೇಕು. ದೇವರಿದ್ದಾನೆ.

❋ **ಶಿಷ್ಯ :** ಹೇಗೆ ಸಾಧನೆ-ಭಜನೆ ಇತ್ಯಾದಿಗಳನ್ನು ಮಾಡಬೇಕು?

**ಶ್ರೀಮಾತೆ :** ಶ್ರೀರಾಮಕೃಷ್ಣರನ್ನು ಪ್ರಾರ್ಥಿಸಿದರೆ ಎಲ್ಲವೂ ಲಭಿಸುವುದು.

❋ ದುಃಖ, ಸಂಕಟಗಳ ನಡುವೆ ಯಾರು ಶ್ರೀರಾಮಕೃಷ್ಣರನ್ನು ಆಧರಿಸಿಕೊಂಡಿರುವರೋ ಅವರು ನಿಜವಾಗಿಯೂ ಶ್ರೀರಾಮಕೃಷ್ಣರನ್ನು ಪಡೆಯುವರು.

❋ ನೋಡು, ಯಾರು ತುಂಬ ಉನ್ನತಾವಸ್ಥೆಯಲ್ಲಿರುತ್ತಾರೋ ಅವರು ಸಂನ್ಯಾಸಿಯಾಗಿ ಎಲ್ಲ ಬಂಧನಗಳಿಂದಲೂ ಮುಕ್ತರಾಗುವರು. ಕೆಲವರು ಸಂಸಾರವನ್ನು ಆಸ್ವಾದಿಸಿ ಎಲ್ಲ ಅನುಭವಗಳನ್ನು ಪಡೆಯಲು ಮಾತ್ರವೇ ಜನ್ಮವೆತ್ತುತ್ತಾರೆ. ನಾನು ಹೇಳುತ್ತೇನೆ, ಒಂದು ಬಾರಿಗೇ ಎಲ್ಲ ಅನುಭವಗಳನ್ನೂ ಮುಗಿಸಿಬಿಡುವುದು ಒಳ್ಳೆಯದು.

❋ **ಶಿಷ್ಯೆ :** ಅಮ್ಮಾ, ನನ್ನ ಮನಸ್ಸು ಆಗಾಗ ಚಂಚಲವಾಗುವುದು; ಭೋಗದ ಕಡೆಗೆ ಹೋಗುವುದು. ಅದೇ ನನಗೆ ಭಯವಾಗುತ್ತಿರುವುದು.

**ಶ್ರೀಮಾತೆ :** ನೀನೇನೂ ಭಯಪಡಬೇಡ. ನಾನು ಹೇಳುತ್ತಿದ್ದೇನೆ, ಕಲಿಯುಗದಲ್ಲಿ ಮಾನಸಿಕ ಪಾಪ, ಪಾಪವಲ್ಲ. ನೀನು ನಿಶ್ಚಿಂತೆಯಿಂದಿರು, ನಿನಗೇನೂ ಭಯ ಬೇಕಿಲ್ಲ.

❋ ಬೆಳಿಗ್ಗೆ ಹಾಗೂ ಸಾಯಂಕಾಲ ಜಪ, ಧ್ಯಾನ ಮಾಡಲು ಕುಳಿತುಕೊಳ್ಳಬೇಕು. ಶಾಂತವಾದ ಮನಸ್ಸಿನಿಂದ ಜಪ, ಧ್ಯಾನ ಮಾಡು. ಇದು ಕಷ್ಟಕರವಾದ ಕೆಲಸ. ಇದಕ್ಕೆ ಹೋಲಿಸಿದರೆ ಮಣ್ಣು ತೆಗೆದು ಉಳುವುದೇ ಸುಲಭ.

*('ಶ್ರೀಶಾರದಾದೇವಿ ವಚನವೇದ', ಪು.೩೯೭–೪೩೩)*